ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 18.02.2025.

**ಪಾಟೀ ಸವಾಲುಃ** ಅರ್ಜಿದಾರ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ

ನಿಆರ್-1ರಲ್ಲಿ ಮುಕ್ತಾನಂದ, ಸುನೀತಾ, ಶಶಿಕಾಂತ ರವರು ವಿಭಜನೆ ಮಾಡಿಕೊಂಡ ಬಗ್ಗೆ ದಾಖಲಾಗಿದೆ ಎಂದರೆ ಸರಿ. ಅದೇ ರೀತಿ ನಿಆರ್-2 ಮತ್ತು 3ರಲ್ಲಿ ಕೂಡಾ ಅವರುಗಳ ಹೆಸರು ದಾಖಲಾಗಿದೆ ಎಂದರೆ ಸರಿ. ನಿಆರ್-1 ರಿಂದ 3ರಲ್ಲಿ ಅರ್ಜಿದಾರಳ ಹೆಸರು ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅವರು ಅಣ್ಣ-ತಮ್ಮಂದಿರು ಆಗಬೇಕು ಎಂದು ನುಡಿಯುತ್ತಾರೆ. ಅರ್ಜಿದಾರಳ ಗಂಡ ಹಾಗೂ ಅವರ ಅಣ್ಣ-ತಮ್ಮಂದಿರ ಮಧ್ಯ ವಾಟ್ನಿಯಾದ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನಿಆರ್-1 ರಿಂದ 3ರಲ್ಲಿ ಮ್ಯೂಟೇಷನ್ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ಅದರ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ನಾನು ಹಾಜರುಪಡಿಸಿದ ನಿಆರ್-1 ರಿಂದ 3ರ ದಾಖಲೆಗಳು ಅರ್ಜಿದಾರಳಿಗೆ ಸಂಬಂಧ ಇರುವುದಿಲ್ಲ ಹಾಗೂ ಅವಳ ಹಕ್ಕು ಸದರಿ ಜಮೀನುಗಳ ಮೇಲೆ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಆರ್-1 ರಿಂದ 3ರ ದಾಖಲೆಗಳಲ್ಲಿ ಅರ್ಜಿದಾರಳ ಯಾವುದೇ ಹಕ್ಕು ಮತ್ತು ಕಬ್ಜಾ ಇರುವುದಿಲ್ಲ ಎಂದರೆ ಸರಿಯಲ್ಲ. ನಿಆರ್-1 ರಿಂದ 3ರ ಆಸ್ತಿಗಳಲ್ಲಿ ಅರ್ಜಿದಾರಳ ಯಾವುದೇ ಹಕ್ಕು ಮತ್ತು ಕಬ್ಜೆ ಇದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನನ್ನ ತಕರಾರಿನಲ್ಲಿ ಅರ್ಜಿದಾರಳಿಗೆ ಅವಳ ಅಣ್ಣ-ತಮ್ಮಂದಿರ ಆಸ್ತಿಯಲ್ಲಿ ಪಾಲು ಇದೆ ಎಂದು ಬರೆಯಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳು ತನಗೆ ಯಾವುದೇ ರೀತಿ ಸ್ಥಿರಾಸ್ತಿಗಳು ಇರುವುದಿಲ್ಲ ಎಂದು, ನೀಡಿರುವ ಪ್ರಮಾಣ ಪತ್ರ ಸರಿ ಇದೆ ಎಂದರೆ, ಎಂದರೆ ಸರಿಯಲ್ಲ. ಅರ್ಜಿದಾರಳಿಗೆ ನ್ಯಾಯಾಲಯದ ಶುಲ್ಕ ಭರಣಾ ಮಾಡುವಷ್ಟು ಸಾಮರ್ಥ್ಯ ಇಲ್ಲದೇ ಇರುವ ಕಾರಣ ಈ ಅರ್ಜಿ ಸಲ್ಲಿಸಿರುತ್ತಾಳೆ ಎಂದರೆ ಸರಿಯಲ್ಲ. ಅರ್ಜಿದಾರಳು ತನಗೆ ಯಾವುದೇ ಸ್ಥಿರ ಮತ್ತು ಚರ ಮೌಲ್ಯವಾದ

ಆಸ್ತಿಗಳು ಇಲ್ಲದೇ ಇರುವ ಬಗ್ಗೆ ಅವಳ ಅರ್ಜಿಯಲ್ಲಿ ನಿಜವಾಗಿ ಹೇಳಿರುತ್ತಾಳೆ ಎಂದರೆ ಸರಿಯಲ್ಲ. ಅರ್ಜಿದಾರಳಿಗೆ ನ್ಯಾಯಾಚಿತವಾದ ಲಾಭ ನೀಡಬಾರದು ಎಂಬ ದುರುದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**